ಅ) *ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಕಾಗಿನಾ ನದಿಯ ಮೇಲೆ ನಿರ್ಮಾಣವಾಗುವ ಕೆರೆಯ ಆಯಕಟ್ಟಿನಲ್ಲಿ ಎಡಗಾ ಗ್ರಾಮದ ಭೂಮಿ ಯೋಜನೆಯ ನಕಾಶೆಯಂತೆ ಮುಳುಗಡೆಯಾಗದಿದ್ದರೆ ಸಹ ಎಡಗಾ ಗ್ರಾಮ ಸಮೀಪ ಏತ ನೀರಾವರಿ ಯೋಜನೆ ಮಂಜೂರಿಯಾಗಿದ್ದು ಕೈಬಿಡಲು ಕಾರಣವೇನು?*

ಆ) *ಈಗಲಾದರೂ 1994-95ನೇ ಸಾಲಿನಲ್ಲಿ ಈ ಏತ ನೀರಾವರಿ ಯೋಜನೆಯನ್ನು ಎಡಗಾ ಗ್ರಾಮ ಸಮೀಪ ನಿರ್ಮಾಣ ಮಾಡಿ ಬಡ ರೈತರಿಗೆ ನೀರಾವರಿಗಾಗಿ ಅನುಕೂಲ ಮಾಡಿಕೊಡಲಾಗುವುದೇ?*

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):

ಅ) ಎಡಗಾ ಗ್ರಾಮದ ಸಮೀಪ ಏತ ನೀರಾವರಿ ಯೋಜನೆ ಮಂಜೂರಾಗಿಲ್ಲದ ಕಾರಣ ಸದರಿ ಏತ ನೀರಾವರಿ ಯೋಜನೆಯನ್ನು ತೆಗೆದುಕೊಳ್ಳುವ ಅಥವಾ ಕೈಬಿಡುವ ಪ್ರಮೇಯವೇ ಇಲ್ಲ.

ಆ) (ಅ) ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿನ ರಸ್ತೆಗಳ ನಿರ್ಮಾಣ ಕುರಿತು

649 - ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಸಂಕೇಶ್ವರ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ರಸ್ತೆಗಳ ನಿರ್ಮಾಣ ಮಾಡುತ್ತಿರುವ (ಥಿಕನೆಸ್) ಪದ್ಧತಿ ಯಾವುದು.*

ಆ) *ಹೈದರಾಬಾದ್ ಅಭಿವೃದ್ಧಿ ಪ್ರಾಧಿಕಾರ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ಎಷ್ಟು ಕಿ.ಮೀ ರಸ್ತೆ ತಯಾರು ಮಾಡಲಾಗಿದೆ ಹಾಗೂ ಅದಕ್ಕೆ ತಗುಲಿದ ಖರ್ಚು ಎಷ್ಟು.*

ಇ) *ಮಲೆನಾಡು ಅಭಿವೃದ್ಧಿ ರಸ್ತೆಗಳ ನಿರ್ಮಾಣದಲ್ಲಿ ಯಾವ ಪದ್ಧತಿಯನ್ನು ಅನುಸರಿಸಲಾಗುತ್ತಿದೆ?*

ಈ) *ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಪ್ರಾಧೀಕಾರವು ಅನುಸರಿಸುತ್ತಿರುವ ಪದ್ಧತಿಯನ್ನು ಮಲೆನಾಡು ಅಭಿವೃದ್ಧಿ ಕೆಲಸಕ್ಕೆ ಯಾಕೆ ಅನುಸರಿಸುತ್ತಿಲ್ಲ?*

ಉ) *ಈ ಎರಡೂ ಮಂಡಳಿಗಳಲ್ಲಿ ಆ ಕೆಲಸಗಳ ಹಿನ್ನೆಲೆಯಲ್ಲಿ ಗುತ್ತಿಗೆದಾರರಿಗೆ ಕೊಡಬೇಕಾಗಿರುವ ಹಣವೆಷ್ಟು?*

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯ ಉನ್ನತ ಮಟ್ಟದ ಸಮಿತಿಯಿಂದ ಅನುಮೋದನೆಗೊಂಡ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಯೋಜನೆಯಡಿಯಲ್ಲಿ ರಸ್ತೆಗಳ ಸುಧಾರಣೆ ಕೆಲಸಗಳಿಗಾಗಿ ರಸ್ತೆಯ ವರ್ಗ ಪರಿಗಣಿಸಿ ಹಾಗೂ ಮೊದಲು ಇದ್ದ ರಸ್ತೆಯ ಸ್ಥಿತಿಗತಿಗಳ ಸರ್ವೇ ಮಾಡಿ ಪ್ರಾಯೋಗಿಕ ಪರೀಕ್ಷೆಗಳ ಮೂಲಕ ಹಾಗೂ ವಾಹನ ಸಾಂದ್ರತೆಯನ್ನು ಅನುಲಕ್ಷಿಸಿ, (ಸಿಬಿಆರ್ ಮೌಲ್ಯಕ್ಕನುಗುಣವಾಗಿ) ರಸ್ತೆಯನ್ನು ಸದೃಢವಾಗಿ ನಿರ್ಮಿಸಲು ಬೇಕಾಗುವ ವಿವಿಧ ರಸ್ತೆಗಳ ದಪ್ಪವನ್ನು ಅಂದಾಜು ಪತ್ರಿಕೆಯಲ್ಲಿ ಅಳವಡಿಸಿ ರಸ್ತೆಗಳನ್ನು ನಿರ್ಮಾಣ ಮಾಡುವ ಪದ್ಧತಿಯನ್ನು ಅನುಸರಿಸಲಾಗಿದೆ.

ಆ) ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಪ್ರಾಧಿಕಾರ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ಸುಧಾರಣೆ ಮಾಡಲಾದ ರಸ್ತೆಗಳ ಉದ್ದ ಹಾಗೂ ಅದಕ್ಕೆ ತಗುಲಿದ ವೆಚ್ಚದ ಜಿಲ್ಲಾವಾರು ವಿವರಗಳು ಈ ಕೆಳಗಿನಂತಿವೆ.

ಜಿಲ್ಲೆ	ತಯಾರಾದ ರಸ್ತೆ ಉದ್ದ	ಫೆಬ್ರುವರಿ 94ರ ಕೊನೆಯವರೆಗೆ ತಗಲಿದ ವೆಚ್ಚ.
ಗುಲಬರ್ಗಾ	289.20 ಕಿಮೀ.	1741.995 ಲಕ್ಷ ರೂ.
ಬೀದರ್	144.40 ಕಿಮೀ.	678.719 ಲಕ್ಷ ರೂ.
ಬಳ್ಳಾರಿ	148.40 ಕಿಮೀ.	749.350 ಲಕ್ಷ ರೂ.
ರಾಯಚೂರು	267.00 ಕಿಮೀ.	794.390 ಲಕ್ಷ ರೂ.
ಒಟ್ಟು	849.00 ಕಿ.ಮೀ.	3964.454 ಲಕ್ಷ ರೂ.

ಇ) ಮಲೆನಾಡು ಅಭಿವೃದ್ಧಿ ರಸ್ತೆಗಳ ನಿರ್ಮಾಣ ವಿಷಯದಲ್ಲಿ ಶಾಸಕರು, ಲೋಕಸಭಾ ಸದಸ್ಯರು, ವಿಧಾನಪರಿಷತ್ ಸದಸ್ಯರುಗಳ ಪ್ರಸ್ತಾವನೆಗಳನ್ನು ಮಲೆನಾಡು ಅಭಿವೃದ್ಧಿ ನಿಗಮಕ್ಕೆ ಅನುಮೋದನೆಗಾಗಿ ಸಲ್ಲಿಸಲಾಗುತ್ತಿದೆ. ನಿಗಮದಿಂದ ಅನುಮೋದನೆಯಾದ ವಿವಿಧ ಕಾಮಗಾರಿಗಳನ್ನು ಮಾತ್ರ ಲೋಕೋಪಯೋಗಿ ನಿಯಮಾವಳಿಯ ಪ್ರಕಾರ ನಿರ್ವಹಿಸಲಾಗುತ್ತಿದೆ ಹಾಗೂ ರಸ್ತೆಯ ವರ್ಗ ಮತ್ತು ಸ್ಥಿತಿಗತಿಗಳನ್ನು ಪರಿಗಣಿಸಿ ರಸ್ತೆಯ ದಪ್ಪಗಳನ್ನು ನಿರ್ಧರಿಸಲಾಗುವುದು.

ಈ) ಇದು ನೀತಿ ನಿಯಮದ ವಿಷಯವಿರುವುದರಿಂದ ಈ ವಿಷಯದಲ್ಲಿ ಮಲೆನಾಡು ಅಭಿವೃದ್ಧಿ ಮಂಡಳಿ ರೂಪಿಸಿದ ನೀತಿ ನಿಯಮಗಳಿಗನುಸಾರವಾಗಿ ಕೆಲಸವನ್ನು ಕೈಗೆತ್ತಿಕೊಳ್ಳಬೇಕಾಗುವುದು.

ಉ) 1) ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಯೋಜನೆಯಡಿಯಲ್ಲಿ ಗುತ್ತಿಗೆದಾರರಿಗೆ ಇಂದಿನವರೆಗೆ ಕೊಡಬೇಕಾಗಿರುವ ಜಿಲ್ಲಾವಾರು ಹಣದ ವಿವರ ಕೆಳಗಿನಂತಿದೆ.

(ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದಂತೆ)

ಗುಲಬರ್ಗಾ	50.35 ಲಕ್ಷ ರೂ.ಗಳು
ಬೀದರ್	31.25 ಲಕ್ಷ ರೂ.ಗಳು
ಬಳ್ಳಾರಿ	22.90 ಲಕ್ಷ ರೂ.ಗಳು
ರಾಯಚೂರು	79.20 ಲಕ್ಷ ರೂ.ಗಳು
	18 3.70 ಲಕ್ಷ ರೂ.ಗಳು

2) ಮಲೆನಾಡು ಅಭಿವೃದ್ಧಿ ಯೋಜನೆಯಡಿಯಲ್ಲಿ ಗುತ್ತಿಗೆದಾರರಿಗೆ ಕೊಡಬೇಕಾಗಿರುವ ಜಿಲ್ಲಾವಾರು ಹಣದ ವಿವರ ಕೆಳಗಿನಂತಿದೆ. (ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದಂತೆ)

ಬೆಳಗಾಂ ಜಿಲ್ಲೆ	4.12 ಲಕ್ಷ ರೂ.ಗಳು
ಧಾರವಾಡ ಜಿಲ್ಲೆ	
ಕಾರವಾರ ಜಿಲ್ಲೆ	12.00 ಲಕ್ಷ ರೂ.ಗಳು
	16.12 ಲಕ್ಷ ರೂ.ಗಳು